## ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪೊನ್ನಂಪೇಟೆ.

**ಸಿ.ಸಿ. ನಂ. 1159/2023** **ಪ್ರಾ.ಸಾ –6**
**ಚಾ.ಸಾ – 8**

ದಿನಾಂಕಃ **29.12.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ಡಾ. ಜಿ. ಬಾಲಕೃಷ್ಣ |
| ತಂದೆಯ ಹೆಸರು | : | ಲೇಟ್ ಜಿ ಅಣ್ಣಪ್ಪ ಶೆಟ್ಟಿ |
| ವಯಸ್ಸು | : | 78 ವರ್ಷ |
| ಉದ್ಯೋಗ | : | ನಿವೃತ್ತ ನೌಕರರು |
| ವಾಸ ಸ್ಥಳ | : | ಮೈಸೂರು |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ನಾನು **2017** ರಿಂದ **2018** ರ ತನಕ ವೈದ್ಯರಾಗಿ ಗೋಣಿಕೊಪ್ಪದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 18.06.2017 ರಂದು ಚಾಸಾ 2 ರವರನ್ನು ಪೊನ್ನಂಪೇಟೆ ಪೊಲೀಸರು ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಗೆ ಹಲ್ಲೆಯ ಹಿನ್ನೆಲೆಯಲ್ಲಿ ಸಮಯ ಸಾಯಂಕಾಲ 05.00 ಗಂಟೆಗೆ ಕರೆದುಕೊಂಡು ಬಂದಿದ್ದರು.

ಅವರಿಗೆ ನಾನು ಪ್ರಥಮ ಚಿಕಿತ್ಸೆ ಕೊಟ್ಟಿದ್ದು ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ.

1. Incised injury 5cm X 4cm present over ulnar aspect of left forearm exposing the deep muscles and bone. Pieces of bone felt. I have refereed to Madikeri District Hospital.

ನಂತರ ಮಡಿಕೇರಿ ಜಿಲ್ಲಾ ಆಸ್ಪತ್ರೆಯಿಂದ ಪಡೆದಂತಹ ವೈದ್ಯಕೀಯ ವರದಿಯನ್ನು ಪರಿಶೀಲಿಸಿ ಚಾಸಾ 2 ರವರಿಗೆ Compound fracture of distal end of left ulna without any neuro vascular deficit. This injury is grievous in nature.

ನಾನು ಈ ಬಗ್ಗೆ ವೈದ್ಯಕೀಯ ವರದಿ ಕೊಟ್ಟಿರುತ್ತೇನೆ. ಸಾಕ್ಷಿಯು ಆ ವೈದ್ಯಕೀಯ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 4 ಎಂದು ಸಹಿಯನ್ನು ನಿ ಪಿ 4(ಎ) ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ 1 ರವರನ್ನು ಪೊನ್ನಂಪೇಟೆ ಪೊಲೀಸರು ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಗೆ ಹಲ್ಲೆಯ ಹಿನ್ನೆಲೆಯಲ್ಲಿ ಸಮಯ ಸಾಯಂಕಾಲ 05.15 ಗಂಟೆಗೆ ಕರೆದುಕೊಂಡು ಬಂದಿದ್ದರು.

ಅವರಿಗೆ ನಾನು ಪ್ರಥಮ ಚಿಕಿತ್ಸೆ ಕೊಟ್ಟಿದ್ದು ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ.

1. Incised injury 4cm X ½ cm present over the posterior parietal region of the scalp.

This injury is simple in nature.

ನಾನು ಈ ಬಗ್ಗೆ ವೈದ್ಯಕೀಯ ವರದಿ ಕೊಟ್ಟಿರುತ್ತೇನೆ. ಸಾಕ್ಷಿಯು ಆ ವೈದ್ಯಕೀಯ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 5 ಎಂದು ಸಹಿಯನ್ನು ನಿ ಪಿ 5(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಜೆ. ಎಸ್. ಎಸ್. ವಕೀಲರಿಂದಃ</u>

ಚಾಸಾ 2 ರವರು ವ್ಯವಸಾಯದ ಕೆಲಸ ಮಾಡುತ್ತಿದ್ದಾಗ ಆ ರೀತಿಯ ಗಾಯಗಳಾಗುವ ಸಂಭವ ಇದೆ ಎಂದರೆ ಸರಿಯಲ್ಲ, ಹಲ್ಲೆ ಮಾಡಿದಾಗ ಈ ರೀತಿ ಗಾಯವಾಗುಬ ಸಾಧ್ಯತೆ ಇದೆ. ಚಾಸಾ 2 ರವರಿಗೆ ನಾನು ಪ್ರಥಮ ಚಿಕಿತ್ಸೆ ನೀಡಿದ್ದು, ಹೆಚ್ಚಿನ ಚಿಕಿತ್ಸೆಗೆ ಮಡಿಕೇರಿ ಆಸ್ಪತ್ರೆಗೆ ಕಳುಹಿಸಿರುತ್ತೇನೆ. ನಾನು ಚಾಸಾ 2 ರವರ ಗಾಯವನ್ನು ನೋಡದೆ ಹೆಚ್ಚಿನ ಚಿಕಿತ್ಸೆಗೆ ಬೇರೆ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆದ್ದರಿಂದ ಗಾಯದ ಸ್ವರೂಪ ಮತ್ತು ತೀವ್ರತೆಯ ಬಗ್ಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಬೇರೆ ವೈದ್ಯರು ನೀಡಿರುವ ವರದಿಯನ್ನು ನಿ ಪಿ

4 ವರದಿಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 1 ರವರಿಗೂ ಚಿಕಿತ್ಸೆ ಕೊಡದೆ ಪೊಲೀಸರಿಗೆ ಸಹಾಯ ಮಾಡಲು ನಿ ಪಿ 5 ದಾಖಲೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿ ಪಿ 4 ಮತ್ತು 5 ದಾಖಲೆಗಳಲ್ಲಿ ನಮೂದಿಸಿರುವ ಗಾಯಗಳು ಮಚ್ಚಿನಿಂದ ಆಗುವ ಸಾಧ್ಯತೆ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ